ಅವಕಾಶ ಕೊಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಆ ವಿಶ್ವಾಸವನ್ನು ನನ್ನ ಮೇಲೆ ಇಟ್ಟುಕೊಳ್ಳಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ವಂದನೆಗಳು.

ಅಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀಯುತರುಗಳಾದ.....

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಅದಕ್ಕಿಂತ ಮುಂದೆ.....

ಅಧ್ಯಕ್ಷರು:- ದಯಮಾಡಿ ಬೇಡಿ, ಇವತ್ತೊಂದು ದಿವಸ, ತಾವು ನನ್ನೊಂದಿಗೆ ಸಹಕರಿಸಿ. ನಾಳೆ ಆ ಪದ್ಧತಿಯನ್ನು ಮುಂದುವರೆಸೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಶೂನ್ಯ ವೇಳೆ ಇವತ್ತು ಬೇಡ ಸಾರ್, ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಇವತ್ತು ನಾವು ಡಿಮ್ಯಾಂಡ್ಸ್ ಬಗ್ಗೆ ಮಾತನಾಡಬೇಕಾಗಿದೆ. ಪರ್‌ಫಾರ್‌ಮೆನ್ಸ್ ಬಜೆಟ್ ಬಗ್ಗೆ ಇದುವರೆವಿಗೂ ಮೂರು ಮಾತ್ರ ನಮಗೆ ಬಂದಿದೆ. ಇವತ್ತು ಚರ್ಚೆಗಿರುವ ಬೇಡಿಕೆಗಳಲ್ಲಿ, ಒಂದು ಬೇಡಿಕೆಗೆ ಸಂಬಂಧಪಟ್ಟಂತೆ ಮಾತ್ರ ಪರ್‌ಫಾರ್ಮೆನ್ಸ್ ಬಜೆಟ್ ಬಂದಿದೆ. ಹೀಗಾದರೆ ನಾವು ಇಲ್ಲಿ ಕೆಲಸ ಮಾಡುವುದು ಹೇಗೆ? ಕಳೆದ ಐದು ದಿವಸಗಳಿಂದ ದಿನನಿತ್ಯ ಈ ವಿಷಯದ ಬಗ್ಗೆ ನಾವಿಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಪರ್‌ಪಾರ್ಮೆನ್ಸ್ ಬಜೆಟ್ ಇಲ್ಲದೇ, ಡೀಟೈಲ್ಸ್ ಇಲ್ಲದೇ ಈ ಕಡೆ ಕುಳಿತಿರತಕ್ಕಂತಹ ಶಾಸಕರು ಹೇಗೆ ತಾನೇ ಕೆಲಸ ಮಾಡುತ್ತಾರೆ?

ಅಧ್ಯಕ್ಷರು:- ಈ ವಿಷಯದ ಬಗ್ಗೆ ನನಗೆ ನಿಮ್ಮಷ್ಟೇ ವ್ಯಥೆ ಮತ್ತು ಖೇದ ಎರಡೂ ಇದೆ. ಏಕೆ ಈ ರೀತಿಯಾಗುತ್ತಿದೆ ಎಂಬುದು ನನಗೆ ಅರ್ಥವೇ ಆಗುತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾಲೆ ರಾಜ್ಯದ ಜನರಿಗೆ ಪತ್ರಿಕಾ ಮಾಧ್ಯಮದ ಮೂಲಕ, ನಾವೇನೋ ಸಿದ್ಧತೆ ಮಾಡಿಕೊಂಡು, ಸೀರಿಯಸ್ ಆಗಿ ಇಲ್ಲಿ ಕೆಲಸ ಮಾಡಲಿಲ್ಲ ಎನ್ನುವಂತಹ ಆಪಾದನೆಗೂ ನಾವು ಗುರಿಯಾಗಬಹುದು. ಇನ್ನೊಂದು ನಾನು ನಿಮಗೆ ಸಲಹೆ ಕೊಡುತ್ತೇನೆ. ಭೋಜನ ವಿರಾಮದ ವೇಳೆಗೆ ಅವಕಾಶ ಕೊಡದಂತೆ ನಾವಿಲ್ಲಿ ಬೇಡಿಕೆಗಳ ಮೇಲೆ ಚರ್ಚೆ ನಡೆಸಲು ಸಿದ್ಧರಾಗಿದ್ದೇವೆ. ದಯಮಾಡಿ ಇದನ್ನು ರದ್ದು ಮಾಡಿ ಸಾಯಂಕಾಲ ಏಳು ಗಂಟೆಯವರೆಗೆ ಕುಳಿತುಕೊಳ್ಳೋಣ; ಈಗಾಗಲೇ ನಾವು ಸಾಕಷ್ಟು ಕಾಲವನ್ನು ಕಳೆದುಕೊಂಡಿದ್ದೇವೆ. ಲಂಚ್ ಹವರ್ ಬೇಡ ಸಾಯಂಕಾಲ ಏಳು ಗಂಟೆಯವರೆಗೆ ಕುಳಿತು ಮಾತನಾಡೋಣ.

ಅಧ್ಯಕ್ಷರು:- ನಾನು ಅದಕ್ಕೆ ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ನಿಮ್ಮ ನಿರ್ಧಾರಕ್ಕೆ ನಾವು ಒಪ್ಪುತ್ತೇವೆ. ಇದು ಶೂನ್ಯ ವೇಳೆ ನಮ್ಮ ಹಕ್ಕು ಆದನ್ನೇ ಕಡಿದು ಹಾಕಿಸರೆ ನಮ್ಮ ಪರಿಸ್ಥಿತಿ ಏನು? ''ಹರಕೊಲ್ಲಲ್ ಪರಕಾಯ್ವನೆ'' ಏನ್ನುವಂತೆ. ಈ ಸದನದಲ್ಲಿ ಅಧ್ಯಕ್ಷರಾಗಿ ಎರಡು ನಿಮಿಷ ನಮಗೆ ಅವಕಾಶ ಕೊಟ್ಟರೆ, ಒಂದುವರೆ ನಿಮಿಷನಲ್ಲಿ ಮುಗಿಸುತ್ತೇವೆ.

ದಯಮಡಿ, ಶೂನ್ಯ ವೇಳೆಯನ್ನು ತೆಗೆದುಹಾಕಬೇಡಿ.

ಅಧ್ಯಕ್ಷರು:- ಇವತ್ತಿನ ಶೂನ್ಯವೇಳೆಯನ್ನು ನಾಳೆಗೆ ವರ್ಗಾಯಿಸೋಣ: ಸನ್ಮಾನ್ಯ ಸಭಾ ನಾಯಕರು ಆವತ್ತು ಸದನತಲ್ಲಿ ಇರಲಿಲ್ಲ. ಕಬ್ಬು ಬೆಳೆಗಾರರ ವಿಚಾರದಲ್ಲಿ ಮಾನ್ಯ ಸದಸ್ಯರುಗಳಾದ ಪುಟ್ಟಣ್ಣಯ್ಯನವರು, ಬಿ.ಐ.ಪಾಟೀಲರು, ವಾಟಾಳ್ ನಾಗರಾಜ್‌ರವರು ಮತ್ತಿತರೆ ಕೆಲವು ಸ್ನೇಹಿತರು ಧರಣಿ ಮಾಡಬೇಕೆಂದು ಇಲ್ಲಿ ಬಂದಿದ್ದರು, ನಾನು ಹೇಳಿದೆ ಸನ್ಮಾನ್ಯ ಸಭಾ ನಾಯಕರನ್ನು ಕರೆಸಿ ಒಂದು ಸಮಗ್ರವಾದ ಹೇಳಿಕೆಯನ್ನು ಮಾಡಿಸುತ್ತೇನೆಂದು ಹೇಳಿದ್ದೆ. ತಾವು ಏನಾದರೂ ಮಧ್ಯಾಹ್ನದವರೆಗೆ ಕಾಲಾವಕಾಶ ಬೇಕು ಏನು ಚರ್ಚೆ ಆಗಿತ್ತು ಎಂದು ತಿಳಿದುಕೊಂಡು ಬಂದು ಹೇಳುವುದಾದರೆ ಆ ಮೇಲೆ ಹೇಳಬಹುದು, ಈಗಲೇ ಹೇಳಬೇಕೆಂದೇನೂ ಇಲ್ಲ. ಆದರೆ ತಾವು ಸದನದಲ್ಲಿದ್ದೀರಿ ಆದ್ದರಿಂದ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಹೆಚ್.ಪಟೇಲ್:- ಹೇಳಿಕೆ ಕೊಡಿ ಸಾಕು ಎಂದರೆ ಹೇಳಿಕೆ ಕೊಡುತ್ತೇನೆ. ನಾನು ಇನ್ನು ಅದಕ್ಕಿಂತ ಹೆಚ್ಚಿಗೆ ತಮ್ಮ ಛೇಂಬರ್‌ನಲ್ಲಿ ಆಫೀಸರ್‌ಗಳನ್ನು ಕರೆಯಿಸಿ ವಾಸ್ತವಿಕ ಚಿತ್ರ ಏನು ಇದೆ, ಈಗಿರತಕ್ಕಂತಹ ಸರ್ಪಲಸ್ ಕಬ್ಬು ಎಷ್ಟು? ಆ ಮೇಲೆ ನಮ್ಮ ಕ್ರಷಿಂಗ್ ಕೆಪ್ಯಾಸಿಟಿ ಏನು? ಈಗ ಪರಿಹಾರ ರೈತರಿಗೆ ಕೊಡುವುದು ಸಾಧ್ಯವೇ ಇಲ್ಲ ಆ ಸ್ಥಿತಿ ಇದೆ. ಅದನ್ನು ನಾವು ಕೂತು ಚರ್ಚೆ ಮಾಡಿ ಪರಸ್ಪರ ಅರ್ಥ ಮಾಡಿಕೊಳ್ಳಬೇಕೇ ಹೊರತು, ಸ್ಟೇಟ್‌ಮೆಂಟ್ ಕೊಟ್ಟು ಇದು ಏಕೆ ಮಾಡಿಲ್ಲ ಅದು ಏಕೆ ಮಾಡಿಲ್ಲ ಎಂದರೆ.....

ಅಧ್ಯಕ್ಷರು:- ಪ್ರತಿ ಪಕ್ಷದ ನಾಯಕರು ಆ ವಿಚಾರ ಪ್ರಸ್ತಾಪ ಮಾಡಿದರು, ಪ್ರತಿ ಪಕ್ಷದ ನಾಯಕರು ಮಾನ್ಯ ವಾಟಾಳ್‌ನಾಗರಾಜ್‌ರವರು, ಪುಟ್ಟಣ್ಣಯ್ಯನವರು, ಬಿ.ಐ.ಪಾಟೀಲರು ಈ ಕಡೆ ಕೆಲವು ಸದಸ್ಯರು ಹೇಳಿದ್ದರು, ಅವರೆಲ್ಲರಿಗೂ ತಾವು ಯಾವಾಗ ಸಮಯ ಸೂಚನೆ ಮಾಡುತ್ತೀರಿ ಆಗ 10 ನಿಮಿಷ ಸಂಬಂಧಿಸಿದ ಅಧಿಕಾರಿಗಳನ್ನು ಕರೆಯಿಸಿ ಅಲ್ಲಿ ಕುಳಿತು ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಏನಾದರೂ ಮಾಡಲಿ ಅವರಿಗೆ ಅನುಕೂಲ ಆಗುವ ಹಾಗೆ ಮಾಡಿ, ಹೇಳುವುದು ಏನೂ ಇಲ್ಲ.

ಅಧ್ಯಕ್ಷರು:- ಅನುಕೂಲ ಮಾಡುವ ದೃಷ್ಟಿಯಿಂದ ಅವರು ಏನು ಹೇಳುತ್ತಾರೆ ಎಂದರೆ, ಬರೀ ಕಾಟಾಚಾರಕ್ಕೆ ಹೇಳಿಕೆ ಮಾಡುವುದು ಬೇಡ, ಸಂಬಂಧಿಸಿದ ಅಧಿಕಾರಿಗಳನ್ನು ಕರೆಯಿಸಿಕೊಂಡು ಎಲ್ಲಾ ನಮ್ಮ ಶಾಸಕರನ್ನು ಕರೆಯಿಸಿಕೊಂಡು ಅಲ್ಲಿ ಚರ್ಚೆ ಮಾಡೋಣ ಎನ್ನುವ ಮಾತು ಹೇಳುತ್ತಿದ್ದಾರೆ, ಅದು ಯೋಗ್ಯ ಎಂದು ನನಗನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಒಪ್ಪುತ್ತೇನೆ, ಏಕೆಂದರೆ ಕಬ್ಬು ಬೆಳೆಗಾರರ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ. ತಾವು ಇದನ್ನು ಪರಿಹಾರ ಮಾಡುತ್ತೇವೆ ಎಂದರೆ

ನಮ್ಮದು ಏನೂ ಅಭ್ಯಂತರವಿಲ್ಲ.

SRI B.I. PATIL:- Excess sugarcane is there. Farmers are facing hardship...

ಶ್ರೀ ಕೃಷ್ಣಪ್ಪ:- ಅಧಿಕಾರಿಗಳ ಜೊತೆ ಫ್ಯಾಕ್ಟರಿ ಮಾಲೀಕರು ಬರಬೇಕು.

ಅಧ್ಯಕ್ಷರು:- ದಯಮಾಡಿ ಸಮಯ ವ್ಯರ್ಥ ಆಗುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಹೇಳುವುದು ಸರಿ ಇದೆ, ಶಿವಮೊಗ್ಗ ಜಿಲ್ಲೆ ತಾವು ನೋಡಿದ್ದೀರಿ, ಅಲ್ಲಿರುವಂತಹ ಕಾರ್ಖಾನೆ ಇನ್ನು ಬಾಗಿಲು ತೆಗೆಯುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಯಾರಿಗೂ ದುಡ್ಡು ಕೊಟ್ಟಿಲ್ಲ. ನಾಲ್ಕು ತಿಂಗಳುಗಳಿಂದ ಅಲ್ಲಿರುವಂತಹ ಲೇಬರರ್ಸ್‌ಗೆ ಸಂಬಳ ಕೊಟ್ಟಿಲ್ಲ. ಕಬ್ಬು ಒಣಗಿ ಹೋಗಿರುವಂತಹವರಿಗೆ ಪರಿಹಾರ ಕೊಡುವುದು, ಈ ವರ್ಷ ಸಮಯಕ್ಕೆ ಸರಿಯಾಗಿ ಕಾರ್ಖಾನೆ ಪ್ರಾರಂಭ ಆಗುವಂತೆ ನೋಡತಕ್ಕಂಥದ್ದು ಇವೆರಡೂ ಒಟ್ಟಿಗೆ ಆಗಬೇಕು. ಇಲ್ಲದಿದ್ದರೆ ರೈತರು ಉಳಿಯುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ಮುಖ್ಯವಾಗಿ ಎಲ್ಲಾ ಕಡೆ ಚಳುವಳಿ ಮಾಡಿ ರೈತರು ಜೈಲಿಗೆ ಹೋಗುತ್ತಿದ್ದಾರೆ ಬೀದರ್‌ನಲ್ಲಿ ಆಗಿದೆ, ಅದಕ್ಕೆ ಬಹಳ ಮುಖ್ಯವಾದುದು ಬಾಕಿ ಕೊಡಬೇಕಾಗಿರುವವರಿಗೆ ಮೊದಲು ಕೊಡಬೇಕು. ಎಂಟು ತಿಂಗಳು, ಆರು ತಿಂಗಳು.....

ಅಧ್ಯಕ್ಷರು:- ಎಲ್ಲಾ ವಿಚಾರಗಳನ್ನು ಸಂಬಂಧಿಸಿದ ಅಧಿಕಾರಿಗಳನ್ನು ಇಟ್ಟುಕೊಂಡು ಸನ್ಮಾನ್ಯ ಮುಖ್ಯ ಮಂತ್ರಿಗಳು ಇರುತ್ತಾರೆ, ಪ್ರತಿ ಪಕ್ಷದ ನಾಯಕರು, ಬಿ.ಐ.ಪಾಟೀಲರು, ವಾಟಾಳ್ ನಾಗರಾಜ್‌ರವರು, ದಯಾಮಾಡಿಸಿದರೆ ಅಲ್ಲಿ ಕೂತು ಇದಕ್ಕೆ ಪರಿಹಾರ ಕಂಡು ಹಿಡಿಯೋಣ. ಚರ್ಚೆ ಮಾಡುವುದಕ್ಕಿಂತ ಪ್ರಚಾರ ಮಾಡುವುದಕ್ಕಿಂತ ಹೆಚ್ಚಿಗೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳತಕ್ಕಂತಹ ಪ್ರಾಮಾಣಿಕ ಪ್ರಯತ್ನ ಮಾಡೋಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಅದು ಬಹಳ ತ್ವರಿತವಾಗಿ ಆಗಬೇಕು. ಮಾಲೀಕರು ಬರಬೇಕು, ಮ್ಯಾನೇಜಿಂಗ್ ಡೈರೆಕ್ಟರ್ ಎಲ್ಲರೂ ಬರಬೇಕು.

ಅಧ್ಯಕ್ಷರು:- ನಾನು ಅವರು ಜೊತೆ ಚರ್ಚೆ ಮಾಡಿ ದಿನಾಂಕ ನಿಗದಿ ಮಾಡಿ ತಮಗೆ ಆ ಮೇಲೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ರೈತರು ಕಬ್ಬು ಬೆಳೆದು, ನಷ್ಟ ಅನುಭವಿಸುತ್ತಿದ್ದಾರೆ. ಅದು ಸ್ವಲ್ಪ ತ್ವರಿತವಾಗಿ ಆಗಬೇಕು

ಅಧ್ಯಕ್ಷರು:- ಮಧ್ಯಾಹ್ನ ತಿಳಿಸುತ್ತೇನೆ.